**ಓ ಎಸ್ ನಂಃ 226/2021**
**ಪಿ ಡಬ್ಲ್ಯೂ ಃ 1**

**ದಿಃ 16.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎನ್ ವಿ ವಕೀಲರಿಂದ :-**

ತಾವು ಈ ಹಿಂದೆ ತಮ್ಮ ಪಾಟೀ ಸವಾಲಿನಲ್ಲಿ ತಮ್ಮ ಮತ್ತು ಪ್ರತಿವಾದಿಯ ನಡುವೆ ಭೋಗ್ಯ ಪತ್ರವಾಗಿತ್ತು ಎಂದು, ಸದರಿ ಭೋಗ್ಯ ಪತ್ರವು ಎಷ್ಟು ರೂಪಾಯಿಗೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿಯು ಮೂರು ವರ್ಷಕ್ಕೆ ಪ್ರತಿ ತಿಂಗಳು ರೂ. 4,000/- ಮತ್ತು ಮೂರು ವರ್ಷಕ್ಕೆ ಪ್ರತಿ ತಿಂಗಳು ರೂ. 7,000/- ಮತ್ತು ಉಳಿದ ನಾಲ್ಕು ವರ್ಷಕ್ಕೆ ಪ್ರತಿ ತಿಂಗಳು ರೂ. 1,000/-. ಪ್ರತಿವಾದಿಗಳು ನನಗೆ ಭೋಗ್ಯದ ಹಣ ಮೊದಲ ಮೂರು ತಿಂಗಳು ಮಾತ್ರ ಪಾವತಿ ಮಾಡಿರುತ್ತಾರೆ. ದಾವಾ ಸ್ವತ್ತಿನ ಸುತ್ತಲು ತೆಂಗಿನ ಮರಗಳು ಇವೆ. ಸದರಿ ಮರಗಳನ್ನು ಪ್ರತಿವಾದಿ ಬೆಳೆಸಿರುತ್ತಾರೆ. ಭೋಗ್ಯದ ಹಣವನ್ನು ಪ್ರತಿವಾದಿಯು ತಮಗೆ ಪಾವತಿ ಮಾಡಿಲ್ಲ ಎಂದು ತಾವು ಭೋಗ್ಯ ಪತ್ರದ ಆಧಾರದ ಮೇರೆಗೆ ಅಸಲು ದಾವಾ ಸಂಖ್ಯೆ 124/1992 ಮಾಗಡಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 124/1992 ತಾವು ಪ್ರತಿವಾದಿ ವಿರುದ್ಧ ಸಲ್ಲಿಸಿದ್ದೀರಿ ಎಂದರೆ ಸರಿ. ಪ್ರತಿವಾದಿಗೆ ಕ್ರಯದ ಕರಾರು ಪತ್ರದ ಪ್ರಕಾರ ದಾವಾ ಸ್ವತ್ತಿನ ಸ್ವಾಧೀನಾನುಭವವನ್ನು ನೀಡಿದ್ದೀರಾ ಎಂದರೆ ಸಾಕ್ಷಿಯು ಭೋಗ್ಯದ ಕರಾರು ಪತ್ರದ ಆಧಾರದ ಮೇರೆಗೆ ಪ್ರತಿವಾದಿಗೆ ದಾವಾ ಸ್ವತ್ತಿನ ಸ್ವಾಧೀನಾನುಭವವನ್ನು ನೀಡಿದ್ದೇವೆ ಎಂದು ಸಾಕ್ಷ್ಯ ನುಡಿಯುತ್ತಾರೆ. ತಾವು ಸಲ್ಲಿಸಿರುವ ಅಸಲು ದಾವಾ ಸಂಖ್ಯೆ 124/1992 ವಜಾ ಆಗಿದೆ ಎಂದರೆ ಸರಿಯಲ್ಲ. ಸದರಿ ದಾವೆಯ ತೀರ್ಪು ಮತ್ತು ಡಿಕ್ರಿ ವಿರುದ್ಧ ಅಪೀಲು ಹಾಕಿದ್ದೀರಿ ಎಂದರೆ ಸಾಕ್ಷಿ ನನಗೆ ನೆನಪಿಲ್ಲ. ತಾವು ಅಸಲು ದಾವಾ ಸಂಖ್ಯೆ 124/1992 ತೀರ್ಪು ಮತ್ತು ಡಿಕ್ರಿ ವಿರುದ್ಧ ರಾಮನಗರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಆರ್ ಎ ನಂ. 117/2008 ರಂತೆ ಅಪೀಲನ್ನು ಸಲ್ಲಿಸಿದ್ದೀರಿ ಎಂದರೆ ಸರಿ. ಸದರಿ ಅಪೀಲು ಸಹ ವಜಾ ಆಗಿದೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 124/1992 ಮತ್ತು ಆರ್ ಎ ನಂ. 117/2008 ರ ತೀರ್ಪು ಮತ್ತು ಡಿಕ್ರಿಗಳ ಬಗ್ಗೆ ತಾವು ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ ನನಗೆ ಈಗ ನೆನಪಿಲ್ಲ.

**ಮುಂದುವರೆದ ಪಾಟೀ ಸವಾಲುಃ ಮುಂದುವರಿದ ಪಾಟೀ ಸವಾಲಿಗೆ ಈ ದಾವೆಯನ್ನು ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**